ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

7 ವಿಧಾನ ಪರಿಷತ್ತಿನ ಅಧಿವೇಶನ

ಇಲಾಖೆ / ವಿಷಯ : DEPARTMENT / SUBJECT: ಭೂಸುಧಾರಣೆ ವಿಧೇಯಕ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE :


## ರಾತ್ರಿ 1 ಗಂಟೆ ತನಕ ಪರಿಷತ್ ಕಲಾಪ ನಡೆದರೂ ಪಾಸೂ ಇಲ್ಲ, ಫೇಲೂ ಇಲ್ಲ

# ಭೂಸುಧಾರಣೆ, ಎಪಿಎಂಸಿ ಬಿಲ್ ಕತ್ತಲಲ್ಲಿ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್‌ನಲ್ಲಿ ಎಪಿಎಂಸಿ ಕಾಯಿದೆಗೆ ಅನುಮೋದನೆ ಪಡೆಯಲು ಸಾಧ್ಯವಾಗದ ಕಾರಣ ಸುಗ್ರೀವಾಜ್ಞೆ ತರುವತ್ತ ಸರಕಾರ ಚಿತ್ತ ಹರಿಸಿದೆ.

ಶನಿವಾರ ಮಧ್ಯರಾತ್ರಿ ಒಂದು ಗಂಟೆಯ ವರೆಗೂ ಕಲಾಪ ನಡೆಯಿತು. ಭೂ ಸುಧಾರಣೆ ತಿದ್ದುಪಡಿ ವಿಧೇಯಕ ಹಾಗೂ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಹಾರ ನಿಯಂತ್ರಣ(ತಿದ್ದುಪಡಿ) ವಿಧೇಯಕಗಳು ವಿಧಾನಸಭೆಯಲ್ಲಿ ಅಂಗೀಕಾರ ಪಡೆದುಕೊಂಡರೂ, ಮೇಲ್ಮನೆಯಲ್ಲಿ ಚರ್ಚೆ ಅಪೂರ್ಣಗೊಂಡಿದೆ. ಈ ಕಾರಣದಿಂದಾಗಿ ಸುಗ್ರೀವಾಜ್ಞೆ ತರುವ ಅನಿವಾರ್ಯತೆಯಲ್ಲಿ ಸರಕಾರ ಸಿಲುಕಿದೆ.

ಮೇಲ್ಮನೆಯಲ್ಲಿ ಆಡಳಿತ ಪಕ್ಷಕ್ಕೆ ಬಹುಮತದ ಕೊರತೆ ಇದೆ. ಹೀಗಾಗಿ, 300ಕ್ಕಿಂತ ಕಡಿಮೆ ಕಾರ್ಮಿಕರಿರುವ ಉದ್ದಿಮೆಗಳು ಬಾಗಿಲು ಮುಚ್ಚುವ ಮುನ್ನ ಸರಕಾರದ ಒಪ್ಪಿಗೆ ಪಡೆಯಬೇಕಿಲ್ಲ ಎಂಬ ಅಂಶ ಒಳಗೊಂಡಿದ್ದ 'ಕರ್ನಾಟಕ ಕೈಗಾರಿಕೆ ವಿವಾದಗಳ ತಿದ್ದುಪಡಿ ವಿಧೇಯಕ-2020'ಕ್ಕೆ ಸೋಲಾಗಿದೆ. ಇದರಿಂದ ಉತ್ತೇಜಿತವಾದ ಪ್ರತಿಪಕ್ಷಗಳು ರೈತರಿಗೆ ಮಾರಕವಾಗಬಹುದಾದ ಎಪಿಎಂಸಿ ಹಾಗೂ ಭೂ ಸುಧಾರಣೆ ವಿಧೇಯಕವನ್ನು ಕೈಬಿಡಬೇಕು ಎಂದು ಆಗ್ರಹಿಸಿವೆ.

**35 ವಿಧೇಯಕಗಳಿಗೆ ಒಪ್ಪಿಗೆ:** ವಿಧಾನ ಪರಿಷತ್‌ನ 141ನೇ ಅಧಿವೇಶನದಲ್ಲಿ ದಾಖಲೆ ಸಂಖ್ಯೆಯ 35 ವಿಧೇಯಕಗಳಿಗೆ ಒಪ್ಪಿಗೆ ಪಡೆಯಲಾಗಿದೆ. ಕೇವಲ ಆರು ದಿನಗಳಲ್ಲಿ ಇಷ್ಟೊಂದು ವಿಧೇಯಕಗಳನ್ನು ಸರಕಾರ ಪಾಸ್ ಮಾಡಿಕೊಂಡಿದ್ದು ಇದೇ ಮೊದಲು. ವಿಧಾನಸಭೆಯಲ್ಲಿ 34 ವಿಧೇಯಕಗಳಿಗೆ ಅನುಮೋದನೆ ದೊರೆತಿದೆ.



ಪಕ್ಷದ ನೂತನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಸಚಿವ ಸಿ.ಟಿ. ರವಿ ಅವರನ್ನು ಮುಖ್ಯಮಂತ್ರಿ ಯಡಿಯೂರಪ್ಪ ಭಾನುವಾರ ಸನ್ಮಾನಿಸಿದರು.

[illegible]

ಮಧ್ಯರಾತ್ರಿ 1 ಗಂಟೆಯವರೆಗೂ ಕಲಾಪ ನಡೆದಿದ್ದು, ಇತ್ತೀಚಿನ ವರ್ಷಗಳಲ್ಲಿ ಇದೇ ಪ್ರಥಮ. 2007ರ ಏ.17ರಂದು ಬೆಳಗಿನ 3.15 ರವರೆಗೂ ನಡೆದಿತ್ತು. ಅಂದು ಸಚಿವ ಹೊರಟ್ಟಿ ಮಂಡಿಸಿದ್ದ ಶಿಕ್ಷಕರ ವರ್ಗಾವಣೆ ವಿಧೇಯಕದ ಕುರಿತು ದೀರ್ಘ ಚರ್ಚೆ ನಡೆದಿತ್ತು.

## ಬೇಡಿಕೆ ಪರಿಗಣಿಸಿ ಎಂದ ಎಮ್ಮೆಲ್ಸಿಗಳು

ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ನಮ್ಮ ಬೇಡಿಕೆಯನ್ನೂ ಗಂಭೀರವಾಗಿ ಪರಿಗಣಿಸಲು ಸಚಿವರಿಗೆ ಸೂಚಿಸುವಂತೆ ಪರಿಷತ್‌ನ ಬಿಜೆಪಿ ಸದಸ್ಯರು ಸಿಎಂ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಬಿಜೆಪಿಯ 15ಕ್ಕೂ ಹೆಚ್ಚು ಪರಿಷತ್ ಸದಸ್ಯರು ಭಾನುವಾರ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಭೇಟಿ ಮಾಡಿ, ''ಪರಿಷತ್‌ಗೆ ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವವರೂ ಇದ್ದಾರೆ. ಇದಲ್ಲದೆ ಪಕ್ಷದಲ್ಲಿ ಹಲವು ಜವಾಬ್ದಾರಿಗಳಿರುತ್ತವೆ. ಬೇರೆ ಬೇರೆ ಕ್ಷೇತ್ರಗಳಿಗೆ ಹೋದಾಗ ಕಾರ್ಯಕರ್ತರು ಕೆಲವು ಬೇಡಿಕೆ ಮುಂದಿಟ್ಟು ಸ್ಪಂದಿಸುವಂತೆ ಮನವಿ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ನಾವು ನಮ್ಮ ಬೇಡಿಕೆ, ಶಿಫಾರಸು ಮಾಡಿದಾಗಲೂ ಯಾವುದೇ ಸ್ಪಂದನೆ ನೀಡುತ್ತಿಲ್ಲ'' ಎಂದು ದೂರಿದ್ದಾರೆ. ಸದಸ್ಯರ ಬೇಡಿಕೆ ಆಲಿಸಿದ ಸಿಎಂ ಯಡಿಯೂರಪ್ಪ ''ಎಲ್ಲ ಸಚಿವರಿಗೂ ತಕ್ಷಣವೇ ಸೂಚನೆ ನೀಡುತ್ತೇನೆ,'' ಎಂದು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಕಟೀಲ್, ಡಿಸಿಎಂ ಲಕ್ಷ್ಮಣ ಸವದಿ, ಸದಸ್ಯರಾದ ಎನ್. ರವಿಕುಮಾರ್, ಶಾಂತಾರಾಮ ಸಿದ್ದಿ, ಭಾರತಿ ಶೆಟ್ಟಿ, ಆಯನೂರು ಮಂಜುನಾಥ್, ಪುಟ್ಟಣ್ಣ, ಶಂಕರ್ ಮತ್ತಿತರರಿದ್ದರು.

## ರಾಜೀನಾಮೆಗೆ ಸಿದ್ಧ ಎಂದ ಸಚಿವ ಸಿಟಿ ರವಿ

ಪಕ್ಷ ಸೂಚಿಸಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧವೆಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ''ಪಕ್ಷದಲ್ಲಿ ಇಷ್ಟು ದೊಡ್ಡ ಜವಾಬ್ದಾರಿಯನ್ನು ನಿರೀಕ್ಷಿಸಿರಲಿಲ್ಲ. ಆದರೆ, ನನ್ನನ್ನು ಗುರುತಿಸಿರುವ ಪಕ್ಷ ಈ ಹೊಣೆ ವಹಿಸಿದೆ. ವರಿಷ್ಠರ ಅಪೇಕ್ಷೆಗೆ ತಕ್ಕಂತೆ ಸಂಘಟನೆಗಾಗಿ ಕಾರ್ಯನಿರ್ವಹಿಸುತ್ತೇನೆ,'' ಎಂದರು.

''ದಿಲ್ಲಿಗೆ ಹೋದರೂ ಕರ್ನಾಟಕವೇ ನನ್ನ ಕರ್ಮಭೂಮಿ. ರಾಜ್ಯ ರಾಜಕಾರಣದಲ್ಲೂ ಮುಂದುವರಿಯುತ್ತೇನೆ. ಅನಂತಕುಮಾರ್ ಏರಿದ ಎತ್ತರಕ್ಕೆ ನಾವು ಬೆಳೆಯಲು ಸಾಧ್ಯವಿಲ್ಲ. ಆದರೆ, ಅವರ ದಾರಿಯಲ್ಲೇ ಸಾಗುತ್ತೇನೆ,'' ಎಂದು ಹೇಳಿದರು.

## ಕಾರ್ಮಿಕ ಸಚಿವರ ಹೋಮ್ ವರ್ಕ್ ಕೊರತೆ

**ಕಾರ್ಮಿಕ ವಿಧೇಯಕ ಸೋಲು**

ಕಾರ್ಮಿಕ ತಿದ್ದುಪಡಿ ವಿಧೇಯಕ ಮಂಡಿಸಲು ಇಲಾಖೆ ಸಚಿವ ಶಿವರಾಮ ಹೆಬ್ಬಾರ್ ಸಜ್ಜಾಗಿ ಬಂದಿಲ್ಲ ಕಾರಣಕ್ಕೆ ಪರಿಷತ್‌ನಲ್ಲಿ ಸರಕಾರ ಹಿನ್ನಡೆ ಅನುಭವಿಸುವಂತಾಯಿತು.

ಶನಿವಾರ ಸಂಜೆ ಈ ವಿಧೇಯಕ ಮಂಡಿಸುವಾಗ ಬಿಜೆಪಿ ಸದಸ್ಯರಿಗೆ ಇದರ ಬಗ್ಗೆ ಸ್ಪಷ್ಟ ಮಾಹಿತಿ ಇರಲಿಲ್ಲ. ಜತೆಗೆ ಐವರು ಸದಸ್ಯರು ಪಾಸಿಟಿವ್ ಕಾರಣ ಕ್ವಾರಂಟೈನ್ ನಲ್ಲಿದ್ದಾರೆ. ವಿಧೇಯಕದ ಬಗ್ಗೆ ಪ್ರತಿಪಕ್ಷಗಳು ಎತ್ತಿದ ಪ್ರಶ್ನೆಗೆ ಸಚಿವ ಹೆಬ್ಬಾರ್ ಬಳಿಯೂ ಸಮರ್ಪಕ ಉತ್ತರವಿರಲಿಲ್ಲ. ಇದರಿಂದಾಗಿ ಪ್ರತಿಪಕ್ಷದವರು ಮತ ವಿಭಜನೆಗೆ ಒತ್ತಡ ತಂದರು. ಈ ಹಂತದಲ್ಲಿ ಏನನ್ನೂ ಮಾಡಲಾಗದ ಅಸಹಾಯಕತೆ ಬಿಜೆಪಿಯದ್ದಾಗಿತ್ತು ಎನ್ನಲಾಗಿದೆ. ವಿತ್ತೀಯ ಹೊಣೆಗಾರಿಕೆ ವಿಧೇಯಕಕ್ಕೆ ಜೆಡಿಎಸ್ ಬೆಂಬಲಿಸಿತ್ತು. ಇದೇ ಮಾದರಿಯಲ್ಲಿ ಇತರ ವಿಧೇಯಕಕ್ಕೂ ಜೆಡಿಎಸ್ ಬೆಂಬಲದ ನಿರೀಕ್ಷೆಯಿತ್ತು. ಆದರೆ, ಸಚಿವರೇ ತಡಬಡಾಯಿಸಿದ್ದರಿಂದ ಪಾಠ ಕಲಿಸುವ ನಿಲುವನ್ನು ಜೆಡಿಎಸ್ ತಳೆಯಿತು ಎಂದು ತಿಳಿದು ಬಂದಿದೆ.

ಆಡಳಿತ ಪಕ್ಷದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಅವರೂ ಇರಲಿಲ್ಲ. ಅವರ ಹತ್ತಿರದ ಬಂಧುವೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದ ರಿಂದ ತುರ್ತಾಗಿ ಬೆಳಗಾವಿಗೆ ಪ್ರಯಾಣ ಬೆಳೆಸಿದ್ದರು. ಈ ಕಾರಣದಿಂದಲೂ ಕಡೆಯ ದಿನ ಸದನದಲ್ಲಿ ಮಂಡನೆ ಯಾದ ವಿಧೇಯಕಗಳ ವಿಚಾರದಲ್ಲಿ ಹೊಂದಾಣಿಕೆ ಸಾಧಿಸಲು ಸಾಧ್ಯವಾಗಲಿಲ್ಲ ಎಂದು ಗೊತ್ತಾಗಿದೆ.